

# ಭರ್ಜರಿ ಗಜ್ಜರಿ!



ಕ್ಯಾರೆಟ್ ಅಥವಾ ಗಜ್ಜರಿಯಲ್ಲಿ ಅತ್ಯಂತ ದೊಡ್ಡ ಗಾತ್ರದ್ದು ನೋಡಿದ್ದೀರಾ..? ಗಾತ್ರ ಮತ್ತು ತೂಕದಲ್ಲಿ ವಿಶ್ವದಲ್ಲೇ ಅತ್ಯಂತ ದೊಡ್ಡದನ್ನು ಅಲಾಸ್ಕಾದ ಜಾನ್ ಇವಾನ್ಸ್ ಬೆಳೆದಿದ್ದಾರೆ. 'ಇಷ್ಟೊಂದು ಭಾರವಿರುವ ಗಜ್ಜರಿಯನ್ನು ನೆಲದಿಂದ ಅಗೆದು ತೆಗೆಯುವುದೇ ಹರಸಾಹಸವಾಯಿತು. ಇದೊಂದು ಅದ್ಭುತ ಅನುಭವ' ಎನ್ನುತ್ತಾರೆ 19 ಪೌಂಡ್ ತೂಕದ ದಾಖಲೆಯ ಗಜ್ಜರಿಯನ್ನು ಬೆಳೆದಿರುವ ಜಾನ್ ಇವಾನ್ಸ್.

ಒಂದೇ ಬೇರಿರುವ 8.60 ಕಿ.ಗ್ರಾಂ. ತೂಕದ ಗಜ್ಜರಿ ಬೆಳೆದಿರುವ ಮೆಕ್ಯಾನಿಕಲ್ ಡಿಸೈನರ್ ಜಾನ್ ಇವಾನ್ಸ್ ಅವರದು ಅಲಾಸ್ಕಾದ ಪಾಮೇರ್‌ನಲ್ಲಿ ವಾಸ.

ದೈತ್ಯ ತರಕಾರಿಗಳನ್ನು ಬೆಳೆದಿರುವ ಇವರ ಹೆಸರಿನಲ್ಲೇ ಏಳು ಜಾಗತಿಕ ದಾಖಲೆಗಳಿವೆ ಎಂದರೆ ಅಚ್ಚರಿಯಾಗುತ್ತದೆ!

ತಮ್ಮ ಜೀವಿತದ 40 ವರ್ಷಗಳನ್ನು ತೋಟಗಾರಿಕೆಯ ಅನುಭವಕ್ಕಾಗಿ ಆರು ರಾಷ್ಟ್ರಗಳಲ್ಲಿ ಕಳೆದಿರುವ ಅವರಿಗೆ ಬೇರೆ ಬೇರೆ ಹವಾಮಾನ ವೈಪರೀತ್ಯಗಳು, ಮಣ್ಣಿನ ಸ್ವರೂಪಗಳ ಬಗ್ಗೆ ಅಪಾರ ಜ್ಞಾನವಿದೆ. ಹೀಗಾಗಿ ಹಣ್ಣು ತರಕಾರಿಗಳ ಬಗ್ಗೆ ಅಪಾರ ಜ್ಞಾನ ಲಭಿಸಿದೆ.

ತೋಟಗಾರಿಕೆಯಲ್ಲಿ ರಾಸಾಯನಿಕ, ಜೈವಿಕ ಹಾಗೂ ಭೌತಿಕ ಗುಣಗಳ ಬಗ್ಗೆ ಹಲವಾರು ಸಂಶೋಧನೆ ನಡೆಸಿದ್ದಾರೆ. ತಾವು ತೋಟದಲ್ಲಿ ಬೆಳೆಯುತ್ತಿರುವ 60 ರಿಂದ 70 ತರಕಾರಿ ಬೀಜಗಳ ಕುರಿತು ಪ್ರಯೋಗ ನಡೆಸಿದ್ದಾರೆ. ಅಲಾಸ್ಕಾದಲ್ಲಿ ನಡೆದ ಸ್ಪರ್ಧೆಗಳಲ್ಲಿ ಭಾಗವಹಿಸಿ ಜಾನ್ ಮತ್ತು ಆತನ ಹೆಂಡತಿ ಮೇರಿ 7 ವರ್ಷದ ಅವಧಿಯಲ್ಲಿ 180 ಬಾರಿ ಗುಣಮಟ್ಟ ಮತ್ತು ದೈತ್ಯ ತರಕಾರಿಗಾಗಿ ಪ್ರಥಮ ಸ್ಥಾನ ಪಡೆದಿದ್ದಾರೆ. 7 ಜಾಗತಿಕ ದಾಖಲೆಗಳು, 18 ರಾಜ್ಯ ದಾಖಲೆಗಳು ಅವರ ಹೆಸರಿನಲ್ಲಿವೆ!

ಬೆಳಿಗ್ಗೆ ನಾಲ್ಕು ಗಂಟೆಗೆ ಎದ್ದು ಅರ್ಧ ಎಕರೆ ಜಮೀನಿನ ಬೆಳೆಗೆ ನೀರು ಹಾಯಿಸುವುದು, ನೆಲ ಅಗೆಯುವುದನ್ನು ಮಾಡುತ್ತಾರೆ ಜಾನ್. ಸಾವಯವ ಮಾದರಿಯ ಕೈತೋಟದಲ್ಲಿ ಬೃಹತ್ ಗಾತ್ರದ ತರಕಾರಿ ಬೆಳೆಯುವ ಇವರು, ಬೆಳೆಗೆ ರಸಗೊಬ್ಬರ ಬಳಸುವುದಿಲ್ಲವಂತೆ.

■ ಪ್ರಕಾಶ ಎಸ್. ಮನ್ನಂಗಿ